ಕತೆ



ನಾಗರಾಜ ವಸ್ತಾರೆ

ಕಲೆ: ವೆಂಕಟ್ರಮಣ ಭಟ್

# ಮುದ್ದಿನ ಹಾವು

**ಕತೆಗೆ ಮುನ್ನ**

(**Posh, in general, shall mean the quality of being elegant or stylish or belonging to upper class. However, PoSH–in Indian Context, shall mean Prevention of Sexual Harassment.** ಈ ಕತೆಯಲ್ಲಿ 'ಪಾಶ್' ಅಂತಂದರೆ ಐಷಾರಾಮೀ ವರ್ಚಸ್ಸೆಂದು ಅರ್ಥವಲ್ಲ. ಭಾರತದ ಸಂದರ್ಭದಲ್ಲಿ 'ಲೈಂಗಿಕ ಕಿರುಕುಳವನ್ನು ತಡೆಯುವ' ಕಾನೂನೆನ್ನುವ ಇಂಗಿತ. ಇನ್ನು, ಪಾಶ್–ಕೌನ್ಸಿಲ್ ಅಂತಂದರೆ ಲೈಂಗಿಕ ಕಿರುಕುಳದ ಪ್ರತಿರೋಧಕ್ಕೆಂದು ಶಾಲಾಕಾಲೇಜುಗಳ ಆಡಳಿತವು ನಿಯೋಜಿಸಿರುವ ಸಮಿತಿ)

**ಕಥಾಪತ್ರ**

'ಪರಿಧಿ ಸರ್... ಪರಿಧಿ ಸರ್...' ಬೆನ್ನಿನಲ್ಲಿ ಕೇಳಸಿಕ್ಕ ಸಲಿಲೆಯ ಧ್ವನಿಯನ್ನೂ, ಒಡನಿದ್ದ ಆತಂಕವನ್ನೂ ಒಟ್ಟೊಟ್ಟಿಗೆ ಗುರುತಿಸಿ ಥಟಕ್ಕನೆ ಹಿಂತಿರುಗಿ ನೋಡಿದೆ. ಹೆಣ್ಣು ಧುಮುಗುಡುತ್ತಲೇ ನನ್ನತ್ತ ನಡೆದುಬಂದಳು. 'ಒಂದೆರಡು ನಿಮಿಷ ಟೈಮಿದೆಯಾ, ಸರ್?' ಪರಸ್ಪರ ಕುಶಲ ವಿಚಾರಿಸುವ ಮುನ್ನವೇ ಅವಸರಿಸಿ ಕೇಳಿದಳು. ತಕ್ಷಣ ವಾಚು ನೋಡಿಕೊಂಡೆ. ಆವಾಗಲೇ ಒಂಬತ್ತೂ ಇಪ್ಪತ್ತಾಗಿ ಹೋಗಿತ್ತು. 'ಲೇಟ್ ಆಯಿತಲ್ಲ, ಸಲಿಲಾ... ನಿಮ್ಮ ಶಾಲೆಯಲ್ಲಿ ಕ್ಲ್ಯಾಸು ಕ್ಲ್ಯಾಸಿಗೂ ಕೆಮೆರಾ ಹಾಕಿ ಟೀಚರುಗಳು ಬಂದಿದಾರೋ ಇಲ್ಲವೋಂತ ಮಾನಿಟರ್ ಬೇರೆ ಮಾಡುತಾರೆ.' ಅಂತಂದು ನಕ್ಕೆ. 'ಎರಡೇ ಎರಡು ನಿಮಿಷ, ಸರ್ ಪ್ಲೀಸ್...' ಎಂದು ಗೋಗರೆದಳು. 'ಬ್ರೇಕ್ ಟೈಮಿನಲ್ಲಿ ಆಗಲ್ಲವಾ?' ಎಂದು ಕೇಳಿ ಮುಗಿಸುವಷ್ಟರಲ್ಲಿಯೇ, 'ನಿಮ್ಮ ಇಮ್ಮೀಡಿಯಟ್ ಸಪೋರ್ಟು ಬೇಕು, ಸರ್ ಇಲ್ಲಾನ್ನಬೇಡಿ.' ಎಂದು ಹೇಳಿ, ಹಾಗೇ ಒಮ್ಮೆ ಉಗುಳು ನುಂಗಿಕೊಂಡು, 'ಪಾಶ್ ಕೌನ್ಸಿಲಿಗೆ ನಿಮ್ಮ ಹೆಸರು ಸಜೆಸ್ಟ್ ಮಾಡಿದೀನಿ. ಆಗಲ್ಲಾನ್ನಬೇಡಿ. ರಿಕ್ವೆಸ್ಟ್... ಐ ವಾಂಟ್ಯು ಬೀಇಂಗ್ ಇನ್ನಿಟ್, ಪ್ರೊಫ್ಯೂಸ್ಲೀ.' ಎಂದು ಅಂಗಲಾಚಿದಳು.

ನಾನು ದಂಗುಬಡಿದುಹೋದೆ. ಈ ಡಿಸ್ಟೈನುಶಾಲೆಯ ಯಾವ ಒಳರಾಜಕಾರಣದಲ್ಲೂ ತೊಡಗುವುದು ತರವಲ್ಲವೆಂದು, ಇಲ್ಲಿ ಸೇರಿದಾಗಲಿನಿಂದ ಇಲ್ಲಿನ ಆಡಳಿತದವರ ಕೂಡ ಅಂತರ ಕಾಯ್ದುಕೊಂಡಿರುವ ನಾನು–ಈವಾಗ, ಈ ಪಾಶ್ ಕೌನ್ಸಿಲೆಂಬ ತಲೆತಿರುಕ ಕೂಟದಲ್ಲಿ ಪಾಲ್ಗೊಳ್ಳುವುದೇ? ಇವಳಿಗೇನು ತಲೆಗಿಲೆ ಕೆಟ್ಟಿದೆಯೇ? ಹುಹ್ವ್...

'ಸಲಿಲಾ, ನಾನಿಲ್ಲಿ ವಿಸಿಟಿಂಗ್ ಪ್ರಾಫಸ್ಸ್ ಅಲ್ಲವೇ? ಐ ಪ್ರೆಫರ್ ಬೀಇಂಗ್ ಸೋ. ಯಾತಕೆ ಬೇಕು ಇಲ್ಲಿನ ರಾಜಕೀಯ–ಹೇಳು.'

'ಹಾಗನ್ನ ಬೇಡಿ, ಪರಿಧಿ ಸರ್... ಹುಡುಗೀರು ಹಾಳಾಗಿಹೋಗುತಾರೆ...' ಹೀಗೆ ಹೇಳುವಾಗ ಸಲಿಲೆಯ ಧ್ವನಿ ತುಸುವೇ ಮುಗ್ಗರಿಸಿ

